aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Accountancy (Paper 3)

EXAM	YEAR	TYPE	SUBJECT
Karnataka Class 12	2027	Sample Paper	Accountancy

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

2026-27 ನೇ ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ – 3

ವಿಷಯ : ಲೆಕ್ಕಶಾಸ್ತ್ರ(30) | **ಗರಿಷ್ಠ ಅಂಕಗಳು : 80**

ಸಮಯ : 03 ಗಂಟೆಗಳು | **ಒಟ್ಟು ಪ್ರಶ್ನೆಗಳ ಸಂಖ್ಯೆ : 32**

ಸೂಚನೆಗಳು :

1] ಪ್ರಶ್ನೆ ಪತ್ರಿಕೆಯು ಎ,ಬಿ,ಸಿ. ಮತ್ತು ಡಿ ಭಾಗಗಳನ್ನು ಹೊಂದಿದೆ. **ಭಾಗ-ಎ** ಯು I, II, III ಮತ್ತು IV ವಿಭಾಗಗಳನ್ನು ಒಳಗೊಂಡಿದೆ.

2] ಅಗತ್ಯವಿರುವ ಕಡೆ ಲೆಕ್ಕದ ಟಿಪ್ಪಣಿಗಳನ್ನು ಬರೆಯಿರಿ.

3] ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷದ ಅವಧಿಯನ್ನು ಹೆಚ್ಚುವರಿಯಾಗಿ ನೀಡಿದೆ.

4] ಹಾಳೆಯ ಬಲಬದಿಯಲ್ಲಿ ಬರೆದಿರುವ ಸಂಖ್ಯೆಗಳು ಪೂರ್ಣ ಅಂಕಗಳನ್ನು ತೋರಿಸುತ್ತವೆ.

5] **ಭಾಗ-ಎ** ಯಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಭಾಗ - ಎ

I. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **(5 x 1 = 5)**

1] ಪಾಲುದಾರನ ಪ್ರವೇಶದ ಸಮಯದಲ್ಲಿ ಮೀಸಲು ಮತ್ತು ಇತರ ಸಂಚಿತ ಲಾಭಗಳನ್ನು ಇವರ ಖಾತೆಗೆ ವರ್ಗಾಯಿಸಲಾಗುವುದು.

a] ಹೊಸ ಅನುಪಾತದಲ್ಲಿ ಎಲ್ಲ ಪಾಲುದಾರರ ಖಾತೆಗೆ

b] ಹೊಸ ಅನುಪಾತದಲ್ಲಿ ಹಳೆಯ ಪಾಲುದಾರರಿಗೆ

c] ಹಳೆಯ ಅನುಪಾತದಲ್ಲಿ ಹಳೆಯ ಪಾಲುದಾರರಿಗೆ

d] ತ್ಯಾಗದ ಅನುಪಾತದಲ್ಲಿ ಹಳೆಯ ಪಾಲುದಾರರಿಗೆ

2] ಕವನ, ಕಾವ್ಯ ಮತ್ತು ಕೀರ್ತಿಯವರ ಲಾಭ ಹಂಚಿಕೆ ಅನುಪಾತ 2:2:1 ಆಗಿದ್ದಾಗ ಕಾವ್ಯಾಳ ನಿವೃತ್ತಿಯ ನಂತರ ಹೊಸ ಲಾಭ ಹಂಚಿಕೆ ಅನುಪಾತ 3:2 ಆಗಿದ್ದರೆ, ಗಳಿಕೆಯ ಅನುಪಾತವು:

a] 3:2 b] 1:1 c] 2:1 d] 2:3

3] ಕಂಪನಿಯ ಪುಸ್ತಕದಲ್ಲಿ ಈ ಕೆಳಗಿನ ರೋಜು ದಾಖಲೆ ಕಾಣಿಸುತ್ತದೆ

ಸಾಲಪತ್ರಗಳ ಅರ್ಜಿ ಮತ್ತು ಹಂಚಿಕೆ ಖಾತೆ	ಖರ್ಚು	95,000
ಸಾಲಪತ್ರ ಬಿಡುಗಡೆಯ ನಷ್ಟ ಖಾತೆ	ಖರ್ಚು	10,000
10% ಸಾಲಪತ್ರಗಳ ಖಾತೆಗೆ		1,00,000
ಸಾಲಪತ್ರಗಳ ವಿಮುಕ್ತಿಗೊಳಿಸುವ ಮೇಲಿನ ಪ್ರೀಮಿಯಂ ಖಾತೆಗೆ		5,000

ಈ ಸನ್ನಿವೇಶದಲ್ಲಿ ಸಾಲ ಪತ್ರವನ್ನು ಬಿಡುಗಡೆಗೊಳಿಸಿದ ಸೋಡಿದರ

a] 15% b] 10% c] 5% d] 3%

aglasem.com For more Question Papers, Sample Papers, Notes & Syllabus visit aglasem.com

4] ಇಲ್ಲಿ ಒಟ್ಟು ಹೊಣೆಗಾರಿಕೆಗೆ ಪ್ರತಿ ಹೊಣೆಗಾರಿಕೆಯ ಶೇಕಡವಾರನ್ನು ತೋರಿಸಲಾಗುತ್ತದೆ.

a] ಸಾಮಾನ್ಯ ಗಾತ್ರದ ಅಢಾವೆ ಪತ್ರಿಕೆ b] ಸಾಮಾನ್ಯ ಗಾತ್ರದ ಆದಾಯ ತಃಖ್ತೆ

c] ತುಲನಾತ್ಮಕ ಆಢಾವೆ ಪತ್ರಿಕೆ d] ತುಲನಾತ್ಮಕ ಆದಾಯ ತಃಖ್ತೆ

5] S.R.G ಕಂಪನಿ ತನ್ನ ಗ್ರಾಹಕರಿಗೆ ಉದ್ದರಿ ಅವಧಿಯನ್ನು 30 ದಿನಗಳಿಗೆ ವಿಸ್ತರಿಸಿದೆ. ಅದರ ಸರಾಸರಿ ಸಂಗ್ರಹಣಾ ಅವಧಿ _____ ಇದ್ದಾಗ ಉದ್ದರಿ ವಸೂಲಾತಿ ನೀತಿ ಕಳಪೆ ಎಂದು ಪರಿಗಣಿಸಲಾಗುತ್ತದೆ.

a] 36 ದಿವಸ b] 30 ದಿವಸ c] 25 ದಿವಸ d] 15 ದಿವಸ

II ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಖಾಲಿ ಬಿಟ್ಟ ಸ್ಥಳವನ್ನು ಭರ್ತಿಮಾಡಿ. **(5 x 1 = 5)**

[ಬಂಡವಾಳ ಲಾಭ, ಹನ್ನೆರಡು, ಪೂರಕ, ನಗದು ಒಳಹರಿವು, ಭವಿಷ್ಯದ ಲಾಭ, ನಗದು ಹೊರಹರಿವು]

6] ಹೊಸ ಲಾಭಾಂಶ ಹಂಚಿಕೆ ಅನುಪಾತವು _____ ಹಂಚಿಕೊಳ್ಳಲು ಅವಶ್ಯವಿದೆ.

7] ಬಂಡವಾಳ ಮೀಸಲನ್ನು _____ ದಿಂದ ಸೃಷ್ಟಿಸಲಾಗುತ್ತದೆ.

8] _____ ತಿಂಗಳ ಒಳಗೆ ಪಾವತಿಸಬೇಕಾಗಿರುವ ಸಾಲಗಳನ್ನು ಅಲ್ಪಾವಧಿ ಸಾಲಗಳೆನ್ನುವರು.

9] ವಿಶ್ಲೇಷಣೆ ಮತ್ತು ಅರ್ಥೈಸುವದು ಒಂದಕ್ಕೊಂದು _____ ಆಗಿವೆ.

10] ವ್ಯಾಪಾರಿ ಬರತಕ್ಕವುಗಳಿಂದ ಸ್ವೀಕರಿಸಿದ ಹಣವು _____ ಆಗಿದೆ.

III ಹೊಂದಿಸಿ ಬರೆಯಿರಿ. **(5 x 1 = 5)**

11]

ಎ	ಬಿ
a] ಬದಲಾಗುವ ಬಂಡವಾಳ ಪದ್ಧತಿ	i] ಪಾಲುದಾರನ ಮರಣ
b] ವಾರಸುದಾರರ ಖಾತೆ	ii] ಸಾಲಪತ್ರಗಳು
c] ಪಾಲುದಾರ ಆಸ್ತಿ ತೆಗೆದುಕೊಂಡಿದ್ದಾನೆ	iii] ಹಣಕಾಸಿನ ವೆಚ್ಚಗಳು
d] ದೀರ್ಘಾವಧಿ ಸಾಲಗಳು	iv] ಕಾರ್ಯಾಚರಣೆಯ ವೆಚ್ಚಗಳು
e] ಬಡ್ಡಿ ಪಾವತಿ	v] ಬಂಡವಾಳ ಖಾತೆ ಶಿಲ್ಕು ಬದಲಾಗುತ್ತದೆ
	vi] ಪಾಲುದಾರನ ಬಂಡವಾಳ ಖಾತೆಗೆ ಖರ್ಚು ಹಾಕಲಾಗುತ್ತದೆ.

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. **(5 x 1 = 5)**

12] ಪಾಲುದಾರಿಕೆ ಕರಾರು ಪತ್ರ ಒಳಗೊಂಡಿರುವ ಯಾವುದಾದರೂ ಒಂದು ಅಂಶವನ್ನು ತಿಳಿಸಿ.

13] ಒಬ್ಬ ಪಾಲುದಾರ ನಿವೃತ್ತಿ ಹೊಂದಲು ನಿರ್ಧರಿಸಿದಾಗ ಸಂಸ್ಥೆಯನ್ನು ಕಡ್ಡಾಯವಾಗಿ ವಿಸರ್ಜಿಸಲಾಗುತ್ತದೆ. (ಸರಿ / ತಪ್ಪು ತಿಳಿಸಿ)

14] ಪ್ರೀಮಿಯಂಗೆ ಶೇರುಗಳನ್ನು ಬಿಡುಗಡೆಗೊಳಿಸುವುದು ಎಂದರೇನು ?

15] **AIFIs** ನ್ನು ವಿಸ್ತರಿಸಿ.

16] ಹೂಡಿಕೆಯ ಚಟುವಟಿಕೆಗೆ ಒಂದು ಉದಾಹರಣೆ ಕೊಡಿ.

ಭಾಗ – ಬಿ

V. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು. (3 x 2 = 6)

17] ಪಾಲುದಾರಿಕೆಯ ಕರಾರು ಪತ್ರ ಎಂದರೇನು ?

18] ನಿವೃತ್ತಿಯಾದ ಪಾಲುದಾರನ ಬಂಡವಾಳ ಖಾತೆಯನ್ನು ಮುಕ್ತಾಯಗೊಳಿಸಲು ತಕ್ಷಣ ನಗದು ಪಾವತಿಸಿದ್ದಕ್ಕೆ ರೋಜು ದಾಖಲೆಯನ್ನು ಕೊಡಿ.

19] ಶೇರುಗಳ ಎರಡು ಪ್ರಕಾರಗಳನ್ನು ತಿಳಿಸಿ.

20] ಕಂಪನಿಯ ಅಢಾವೆ ಪತ್ರಿಕೆಯಲ್ಲಿ ಯಾವ ತಲೆಬರಹದ ಅಡಿಯಲ್ಲಿ ಈ ಕೆಳಗಿನ ಬಾಬ್ತುಗಳನ್ನು ತೋರಿಸುತ್ತೀರಿ?

a] ಕಟ್ಟಡ

b] ಹಕ್ಕು ಸಾಧಿಸದ ಲಾಭಾಂಶ

21] ನಗದು ಹರಿವಿನ ತಃಖ್ತೆ ತಯಾರಿಸುವದರ ಯಾವುದಾರರೂ ಎರಡು ಉದ್ದೇಶಗಳನ್ನು ಬರೆಯಿರಿ.

ಭಾಗ – ಸಿ

VI. ಯಾವುದಾದರು ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. (3 x 6 = 18)

22] ಸಂಜು ಮತ್ತು ಮಂಜುರವರು ಒಂದು ಸಂಸ್ಥೆಯ ಪಾಲುದಾರರಾಗಿರುತ್ತಾರೆ. ಅವರುಗಳು 3:2 ರ ಅನುಪಾತದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೆ ಮಾಡಿಕೊಳ್ಳುತ್ತಿರುತ್ತಾರೆ. ಅವರು ಅಂಜು ಎಂಬುವವರನ್ನು ಸಂಸ್ಥೆಗೆ ಸೇರಿಸಿಕೊಂಡು, ಬರುವ ಲಾಭದಲ್ಲಿ 1/6 ಭಾಗ ಕೊಡುವುದರ ಜೊತೆಗೆ ಕನಿಷ್ಠ ₹50,000 ಲಾಭವನ್ನು ನೀಡುವ ಭರವಸೆಯನ್ನು ಕೊಡುತ್ತಾರೆ. ಸಂಸ್ಥೆಗೆ ₹1,80,000 ಲಾಭ ವಾಗಿರುತ್ತದೆ. ಸಂಜು ಮತ್ತು ಮಂಜುರವರು ಕೊಟ್ಟಿರುವ ಸಮನಾದ ಭರವಸೆಯನ್ನು ಕೊಟ್ಟಿರುವಾಗ, ಪ್ರತಿ ಪಾಲುದಾರರ ಲಾಭದ ಭಾಗವನ್ನು ಕಂಡು ಹಿಡಿಯಿರಿ. ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತಯಾರಿಸಿ.

23] ಭರತ್ ಮತ್ತು ಭಾವನ ಸಂಸ್ಥೆಯ ಪಾಲುದಾರರಾಗಿದ್ದು, 3:2 ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ಅವರು ಭಾಗ್ಯಾಳನ್ನು ಹೊಸ ಪಾಲುದಾರಳನ್ನಾಗಿ ಸೇರಿಸಿಕೊಳ್ಳುವರು. ಹೊಸ ಲಾಭ ಹಂಚಿಕೆ ಅನುಪಾತವು 5:4:3 ಆಗಿರುವುದು. ಭರತ್ ಮತ್ತು ಭಾವನಾಳ ತ್ಯಾಗದ ಅನುಪಾತವನ್ನು ಕಂಡು ಹಿಡಿಯಿರಿ.

24] ಯುವರಾಜ, ಲಿಂಗರಾಜ ಮತ್ತು ಗಿರಿರಾಜ ಪಾಲುದಾರರಾಗಿದ್ದು, ಲಾಭ ನಷ್ಟವನ್ನು 2:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 01.04.2024 ರಂದು ಅವರ ಬಂಡವಾಳವು ತಲಾ ₹1,00,000 ಆಗಿದೆ. ದಿನಾಂಕ 30.09.2024 ರಂದು ಗಿರಿರಾಜ ನಿಧನ ಹೊಂದಿದ್ದು, ಪಾಲುದಾರಿಕೆ ಒಪ್ಪಂದವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

a] ಗಿರಿರಾಜನ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 10 ರಂತೆ

b] ಗಿರಿರಾಜನ ಮಾಸಿಕ ಸಂಬಳ ₹3,000

c] ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ನಿಧನ ಹೊಂದಿದ ದಿನಾಂಕದವರೆಗಿನ ಗಿರಿರಾಜನ ಲಾಭದ ಪಾಲು. 2023-24 ರಲ್ಲಿ ಸಂಸ್ಥೆಯ ಲಾಭವು ₹50,000 ಆಗಿದೆ.

d] ಗಿರಿರಾಜನ ಪಾಲಿನ ಕೀರ್ತಿ ಮೌಲ್ಯ ₹15,000 (A.S.-26ರ ಪ್ರಕಾರ)

ಗಿರಿರಾಜನ ವಾರಸುದಾರರ ಖಾತೆಯನ್ನು ತಯಾರಿಸಿ.

25] ಈ ಕೆಳಗಿನ ವಿವರಗಳಿಂದ ಮೆಕಟ್ರಾನಿಕ್ಸ್ ಕಂಪನಿ ನಿಯಮಿತದ ಅಢಾವೆ ಪತ್ರಿಕೆಯನ್ನು ಕಂಪನಿ ಕಾಯಿದೆ 2013ರ ಪರಿಚ್ಛೇಧ III ರ ಪ್ರಕಾರ 31.03.2025 ಕ್ಕೆ ತಯಾರಿಸಿ.

ವಿವರಗಳು	₹
ಶೇರು ಬಂಡವಾಳ	**4,00,000**
ಮೀಸಲು ಮತ್ತು ಉಳಿಕೆ ಲಾಭ	**2,00,000**
ಸಾಹುಕಾರರು	**1,00,000**
ದೀರ್ಘಾವಧಿ ಸಾಲಗಳು	**3,50,000**
ಕೊಡತಕ್ಕ ಹುಂಡಿಗಳು	**50,000**
ಸ್ಥಿರಾಸ್ತಿಗಳು	**5,00,000**
ಕೈಯಲ್ಲಿರುವ ನಗದು	**2,00,000**
ಬ್ಯಾಂಕಿನಲ್ಲಿ ನಗದು	**1,00,000**
ಇತರೇ ಚಾಲ್ತಿಯೇತರ ಆಸ್ತಿಗಳು	**3,00,000**

26] ಬಾಲಾಜಿ ಕಂಪನಿ ನಿಯಮಿತ ಈ ಕೆಳಗಿನ ಮಾಹಿತಿಯನ್ನು ನೀಡಿದೆ

01.04.2024 ರಂದು ಇದ್ದಂತೆ ಯಂತ್ರೋಪಕರಣ - ₹1,50,000

31.03.2025 ರಂದು ಇದ್ದಂತೆ ಯಂತ್ರೋಪಕರಣ - ₹2,00,000

01.04.2024 ರಂದು ಇದ್ದಂತೆ ಸಂಚಿತ ಸವಕಳಿ - ₹75,000

31.03.2025 ರಂದು ಇದ್ದಂತೆ ಸಂಚಿತ ಸವಕಳಿ - ₹50,000

ವರ್ಷಾವಧಿಯಲ್ಲಿ ಸಂಚಿತ ಸವಕಳಿ ₹30,000 ಇರುವ ₹80,000 ವೆಚ್ಚದ ಯಂತ್ರವೊಂದನ್ನು ₹40,000 ಗಳಿಗೆ ಮಾರಾಟ ಮಾಡಲಾಗಿದೆ.

ಈ ಮೇಲಿನ ಮಾಹಿತಿಯ ಆಧಾರದ ಮೇಲೆ ಹೂಡಿಕೆ ಚಟುವಟಿಕೆಗಳಿಂದಾದ ನಗದು ಹರಿವನ್ನು ಲೆಕ್ಕಚಾರ ಮಾಡಿರಿ.

ಭಾಗ - ಡಿ

II. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹನ್ನೆರಡು ಅಂಕಗಳು. (**3 x 12 = 36**)

27] ವರಲಕ್ಷ್ಮೀ, ವನಜಾಕ್ಷಿ ಮತ್ತು ಭೀಮಾಂಬಿಕ ಪಾಲುದಾರರಾಗಿದ್ದು 5:3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಾರೆ. 31.03.2025 ರಂದು ಭೀಮಾಂಬಿಕ ಸಂಸ್ಥೆಯಿಂದ ನಿವೃತ್ತಳಾದಳು. ಈ ದಿನಾಂಕದಂದು ಸಂಸ್ಥೆಯ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ : 31.03.2025 ರಂದು ಇದ್ದಂತೆ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	ಆಸ್ತಿಗಳು	₹
ಸಾಹುಕಾರರು	**15,000**	ಬ್ಯಾಂಕ್	**8,500**
ಕೊಡತಕ್ಕ ಹುಂಡಿಗಳು	**12,000**	ಸಾಲಗಾರರು - 6,000	

ಕಾನೂನಾತ್ಮಕ ಶುಲ್ಕಗಳಿಗೆ		ಕಳೆ (-) : PDD - 500	**5,500**
ತೆಗೆದಿರಿಸುವಿಕೆ	**6,000**	ದಾಸ್ತಾನು	**9,000**
ಸಾಮಾನ್ಯ ಮೀಸಲು	**10,000**	ಪೀಠೋಪಕರಣ	**40,000**
ಬಂಡವಾಳಗಳು :		ಕಟ್ಟಡ	**80,000**
ವರಲಕ್ಷ್ಮೀ - 50,000			
ವನಜಾಕ್ಷಿ - 30,000			
ಭೀಮಾಂಬಿಕ - 20,000	**1,00,000**		
	1,43,000		**1,43,000**

ಹೆಚ್ಚಿನ ಮಾಹಿತಿ :-

a] ಕಟ್ಟಡದ ಮೌಲ್ಯ ಶೇ. 20 ಹೆಚ್ಚಾಗಿದೆ ಮತ್ತು ಸಂಶಯಾತ್ಮಕ ಸಾಲಕ್ಕಾಗಿ ತೆಗೆದಿರಿಸುವಿಕೆಯನ್ನು(PDD) ಶೇ. 10ಕ್ಕೆ ಹೆಚ್ಚಿಸಿ.

b] ಪೀಠೋಪಕರಣವನ್ನು ₹45,000 ಕ್ಕೆ ಮೌಲ್ಯಮಾಪನ ಮಾಡಲಾಗಿದೆ.

c] ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹40,000 ಎಂದು ಮೌಲ್ಯ ಮಾಡಲಾಗಿದೆ. (A.S. 26 ರ ಪ್ರಕಾರ)

d] ದಾಸ್ತಾನಿನ ಮೌಲ್ಯವನ್ನು ಶೇ. 10ರಷ್ಟು ಕಡಿಮೆಗೊಳಿಸಬೇಕು.

ತಯಾರಿಸಿ. (i) ಪುನರ್ ಮೌಲ್ಯಮಾಪನ ಖಾತೆ
(ii) ಪಾಲುದಾರರ ಬಂಡವಾಳ ಖಾತೆ ಮತ್ತು
(iii) ಸಂಸ್ಥೆಯ ಹೊಸ ಅಢಾವೆ ಪತ್ರಿಕೆ.

28] ಮಾಯ ಮತ್ತು ಮಾನಸ ಎಂಬ ಪಾಲುದಾದರು ಲಾಭನಷ್ಟವನ್ನು ಅನುಕ್ರಮವಾಗಿ 2:1 ರ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31.03.2025 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ : 31.03.2025 ರಂದು ಇದ್ದಂತೆ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	ಆಸ್ತಿಗಳು	₹
ಸಾಹುಕಾರರು	**20,000**	ಬ್ಯಾಂಕಿನಲ್ಲಿ ನಗದು	**6,000**
ಕೊಡತಕ್ಕ ಹುಂಡಿಗಳು	**15,000**	ಬರತಕ್ಕ ಹುಂಡಿಗಳು	**10,000**
ಮಾಯಾಳ ಸಾಲ	**30,000**	ದಾಸ್ತಾನು	**30,000**
ಸಾಮಾನ್ಯ ಮೀಸಲು	**6,000**	ಸಾಲಗಾರರು - 45,000	
ಬಂಡವಾಳ :		ಕಳೆಯಿರಿ PDD - 5,000	**40,000**
ಮಾಯಾ - 50,000		ಹೂಡಿಕೆಗಳು	**15,000**
ಮಾನಸ - 25,000	**75,000**	ಪೀಠೋಪಕರಣಗಳು	**20,000**
		ಯಂತ್ರೋಪಕರಣ	**25,000**
	1,46,000		**1,46,000**

ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸಿದರು.

a] ಆಸ್ತಿಗಳನ್ನು ಈ ಕೆಳಕಂಡಂತೆ ವಿಲೇವಾರಿ ಮಾಡಲಾಯಿತು:

ಬರತಕ್ಕ ಹುಂಡಿಗಳು ₹8,500, ಸಾಲಗಾರರು ₹42,000, ದಾಸ್ತಾನು ₹25,000, ಪೀಠೋಪಕರಣಗಳು ₹22,000, ಯಂತ್ರೋಪಕರಣ ₹28,000 ಮತ್ತು ದಾಖಲಾಗದ ಟೈಪರೈಟರ್ ₹3,500.

b] ಮಾನಸಳು ಹೂಡಿಕೆಯನ್ನು ಒಪ್ಪಿಕೊಂಡ ಮೌಲ್ಯ ₹14,000 ಕ್ಕೆ ತೆಗೆದುಕೊಂಡಿರುತ್ತಾಳೆ,

c] ಸಾಹುಕಾರರ ಖಾತೆಗಳನ್ನು ಪುಸ್ತಕ ಬೆಲೆಗಿಂತ ಶೇ. 10ರ ಕಡಿಮೆ ಬೆಲೆಗೆ ಚುಕ್ತಗೊಳಿಸಲಾಯಿತು.

d] ಕೊಡತಕ್ಕ ಹುಂಡಿಗಳನ್ನು ಮಾಯಾ ಪಾವತಿಸಿದ್ದಾಳೆ.

e] ವಿಲೇವಾರಿ ವೆಚ್ಚ ₹2,000 ಆಗಿದೆ.

ತಯಾರಿಸಿ : i) ವಿಲೇವಾರಿ ಖಾತೆ

ii) ಪಾಲುದಾರರ ಬಂಡವಾಳ ಖಾತೆ ಮತ್ತು

iii) ಬ್ಯಾಂಕ್ ಖಾತೆ.

29] ಸಿಟಿ ಸೆಂಟ್ರಲ್ ಕಂಪನಿ ನಿಯಮಿತ ಇವರು ₹100ರ ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ಪ್ರತಿ ಶೇರಿಗೆ ₹20ರ ಪ್ರೀಮಿಯಂನಂತೆ ಬಿಡುಗಡೆ ಮಾಡಿದ್ದಾರೆ. ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿದೆ.

₹30 ಅರ್ಜಿ ಹಣ

₹50 ಹಂಚಿಕೆ ಹಣ (ಪ್ರೀಮಿಯಂ ಸೇರಿ)

₹40 ಪ್ರಥಮ ಮತ್ತು ಅಂತಿಮ ಕರೆ ಹಣ

ಎಲ್ಲ ಶೇರುಗಳು ವಂತಿಕೆಯಾಗಿದ್ದು ಹಣ ಸ್ವೀಕರಿಸಲಾಗಿದೆ. ಆದರೆ 1000 ಶೇರುಗಳ ಮೇಲಿನ ಪ್ರಥಮ ಮತ್ತು ಅಂತಿಮ ಕರೆಹಣ ಸಂದಾಯವಾಗಿರುವುದಿಲ್ಲ. ನಿರ್ದೇಶಕರು ಅವುಗಳನ್ನು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ. ಮುಟ್ಟುಗೋಲು ಹಾಕಿಕೊಂಡ 1,000 ಶೇರುಗಳಲ್ಲಿ ಕೇವಲ 500 ಶೇರುಗಳನ್ನು ಮಾತ್ರ ₹80ಕ್ಕೆ ಬಂದಂತೆ ಪೂರ್ಣ ಪಾವತಿಸಿದ ಶೇರುಗಳೆಂದು ಮರು ಬಿಡುಗಡೆ ಮಾಡಿರುತ್ತಾರೆ.

ಕಂಪನಿಯ ಪುಸ್ತಕದಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

30] ಅತ್ರಿದತ್ತ ಕಂಪನಿ ನಿಯಮಿತ ಇವರು ತಲಾ ₹100 ಮುಖಬೆಲೆಯ 10,000, 10%ಸಾಲಪತ್ರಗಳನ್ನು ದಿನಾಂಕ : 01.04.2024 ರಂದು ಶೇ. 10 ರ ಸೋಡಿ ಬೆಲೆಯಲ್ಲಿ ನೀಡಿದೆ ಮತ್ತು ಶೇ. 10 ರ ಪ್ರೀಮಿಯಂನಲ್ಲಿ ವಿಮೋಚನೆ ಮಾಡುತ್ತದೆ. ಬಡ್ಡಿಯನ್ನು ಸೆಪ್ಟೆಂಬರ್ 30 ಮತ್ತು ಮಾರ್ಚ್ 31 ರಂದು ಅರ್ಧವಾರ್ಷಿಕವಾಗಿ ಪಾವತಿಸಲಾಗುತ್ತದೆ ಎಂದು ಊಹಿಸಿ ಸಾಲ ಪತ್ರಗಳ ನೀಡಿಕೆ ಮತ್ತು ಸಾಲಪತ್ರಗಳ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ 31.03.2025 ರಂದು ಕೊನೆಗೊಳ್ಳುವ ಅವಧಿಗೆ ರೋಜು ದಾಖಲೆಗಳನ್ನು ಬರೆಯಿರಿ. ಮೂಲದಲ್ಲಿ ಕಡಿತಗೊಳಿಸಿದ ತೆರಿಗೆಯು ಶೇ. 10 ರಷ್ಟಿದೆ.

31] ತೇಜು ಕಂಪನಿ ನಿಯಮಿತರವರ ಈ ಕೆಳಗಿನ ಮಾಹಿತಿಗಳಿಂದ 31.03.2024 ಮತ್ತು 31.03.2025 ರ ವರ್ಷದ ಅಂತ್ಯಕ್ಕೆ ತುಲನಾತ್ಮಕ ಲಾಭ - ನಷ್ಟದ ತಃಖ್ತೆಯನ್ನು ತಯಾರಿಸಿ.

ವಿವರಗಳು	31.03.2024 ₹	31.03.2025 ₹
ಕಾರ್ಯಾಚರಣೆಯಿಂದ ಬಂದ ಆದಾಯ	**10,00,000**	**11,00,000**
ಇತರೆ ಆದಾಯ	**50,000**	**80,000**
ನೌಕರರ ಪ್ರಯೋಜನದ ಖರ್ಚು	**1,50,000**	**1,65,000**
ಸರಕು ಖರೀದಿ	**4,00,000**	**5,50,000**

ದಾಸ್ತಾನಿನಲ್ಲಾದ ಬದಲಾವಣೆ	**2,00,000**	**1,00,000**
ಹಣಕಾಸಿನ ವೆಚ್ಚಗಳು	**50,000**	**30,000**
ಸವಕಳಿ	**60,000**	**50,000**
ಆದಾಯ ತೆರಿಗೆ	**57,000**	**85,500**

32] ಈ ಕೆಳಗಿನ ಮಾಹಿತಿಗಳಿಂದ, ಅನುಪಾತಗಳನ್ನು ಕಂಡುಹಿಡಿಯಿರಿ.

a] ತ್ವರಿತ ಅನುಪಾತ

b] ಸಾಲ - ಇಕ್ವಿಟಿ ಅನುಪಾತ

c] ಒಟ್ಟು ಆಸ್ತಿಗಳ - ಸಾಲದ ಅನುಪಾತ

d] ದಾಸ್ತಾನು ಆವರ್ತನ ಅನುಪಾತ

e] ವ್ಯಾಪಾರೀ ಬರತಕ್ಕವುಗಳ ಆವರ್ತನ ಅನುಪಾತ

f] ನಿವ್ವಳ ಲಾಭ ಅನುಪಾತ

ವಿವರಗಳು	**₹**
ಇಕ್ವಿಟಿ ಶೇರು ಬಂಡವಾಳ	**2,00,000**
ಸಾಮಾನ್ಯ ಮೀಸಲು	**1,00,000**
ದೀರ್ಘಾವದಿ ಸಾಲಗಳು	**1,00,000**
ವ್ಯಾಪಾರೀ ಕೊಡತಕ್ಕವುಗಳು	**1,25,000**
ಸ್ಥಿರಾಸ್ತಿಗಳು	**1,50,000**
ದಾಸ್ತಾನು	**80,000**
ವ್ಯಾಪಾರೀ ಬರತಕ್ಕವುಗಳು	**2,20,000**
ನಗದು ಮತ್ತು ನಗದು ಸಮಾನಕಗಳು	**75,000**
ಒಟ್ಟು ಆಸ್ತಿಗಳು	**5,25,000**
ಕಾರ್ಯಾಚರಣೆಯಿಂದ ಬಂದ ಆದಾಯ	**4,00,000**
ಸ್ಥೂಲ ಲಾಭ	**80,000**
ತೆರಿಗೆ ಮುಂಚಿನ ಲಾಭ	**50,000**
ಆದಾಯ ತೆರಿಗೆ	**15,000**

*****

GOVERNMENT OF KARNATAKA
KARNATAKA SCHOOL EXAMINATION AND ASSESSMENT BOARD

6TH CROSS, MALLESHWARAM, BENGALURU – 560 003

2026 -27 II PUC MODEL QUESTION PAPER – 3

SUBJECT: ACCOUNTANCY (30) **MAXIMUM MARKS: 80**

TIME: 03 HOURS **NUMBER OF QUESTIONS: 32**

Instructions :

1] The question paper contains four parts A, B, C and D. Part – A contains of four sections I, II, III and IV.
2] Provide working notes wherever necessary.
3] 15 minutes extra has been allotted for candidates to read the questions.
4] Figures in the right hand margin indicate full marks.
5] For PART - A questions, only the first written answers will be considered for evaluation.

PART – A

I. Choose the correct answer from the choices given. **(5 x 1 = 5)**

1] The Balance of reserve and other accumulated profits at the time of admission of a new partner are transferred to :

a] All partners in new ratio b] Old partners' in new ratio
c] Old partners' in old ratio d] Old partner in sacrifice ratio

2] The profit sharing ratio among Kavana, Kavya and Keerthi were 2 : 2 : 1. The new profit sharing ratio after Kavya's retirement is 3:2. The gain ratio is

a] 3 : 2 b] 1 : 1 c] 2 : 1 d] 2 : 3

3] The following journal entry appears in the books of a company

Debenture Application and Allotment A/c	Dr.	95,000	
Loss on issue of debentures Account	Dr.	10,000	
To 10% debentures A/c			1,00,000
To Premium on redemption of debentures A/c			5,000

In this case the debentures are issued at a discount of

a] 15% b] 10% c] 5% d] 3%

4] Percentage of each liability to the total liabilities is shown in

a] Common size balance sheet b] Common size Income statement
c] Comparative Balance Sheet d] Comparative Income Statement

5] S.R.G. Company Ltd., extends credit terms of 30 days, to its customers. Its credit collection would be poor if its average collection period was _____.

a] 36 days b] 30 days c] 25 days d] 15 days

II. Fill in the blanks by choosing the appropriate answers from those given in the bracket. (5 x 1 = 5)

[capital profit, twelve, complimentary, cash inflow, future profit, cash outflow]

6] New profit sharing ratio is required for sharing _____.

7] Capital reserve is created out of _____.

8] Loans which are repayable within _____ months are called as short term borrowings.

9] Analysis and interpretation are _____ to each other.

10] Collection of Cash from trade receivable is _____.

III. Match the following. (5 x 1 = 5)

11]

A	**B**
a] Fluctuating Capital system	(i) Death of a partner
b] Executor's Account	(ii) Debentures
c] Assets taken over by partner	(iii) Financial expenses
d] Long term borrowings	(iv) Operating expenses
e] Interest paid	(v) Capital A/c. balance changes
	(vi) Debited to partner's capital A/c

IV. Answer the following questions in one word or one sentence each. (5 x 1 = 5)

12] State any one content of partnership deed.

13] A firm is compulsorily dissolved when a partner decides to retire (State True / False).

14] What is issue of shares at premium?

15] Expand **AIFIs.**

16] Give an example for investing activity.

PART – B

V. Answer any three questions, each question carries two marks. (3 x 2 = 6)

17] What is Partnership deed?

18] Give journal entry to close retiring partner's capital A/c when payment is made immediately.

19] List out any two categories of share capital.

20] Under which heads do you show the following items in the balance sheet of a company?

a] Building

b] Unclaimed dividend

21] Write any two objectives for preparing cash flow statement.

PART – C

VI. Answer any three questions, each question carries six marks. (3 x 6 = 18)

22] Sanju and Manju were partners in a firm sharing profits and losses in the ratio of 3:2. They admit Anju for 1/6th Share in profit and guaranteed that her share of profit will not be less than ₹50,000. The total profits of the firm was ₹1,80,000. Calculate the share of profits for each partner when guarantee is given by Sanju and Manju equally. Prepare profit and loss appropriation account.

23] Bharat and Bhavana are partners sharing profits and losses in the ratio of 3:2. They admit Bhagya into partnership and the new ratio was agreed to be 5:4:3. Calculate the sacrifice ratio of Bharat and Bhavana.

24] Yuvaraja, Lingaraja and Giriraja are partners sharing profits and losses in the ratio of 2 : 2 : 1. Their capitals as on 01.04.2024 were ₹1,00,000 each. Giriraja died on 30.09.2024 and the partnership deed provides the following:

a] Interest on Giriraja's capital at 10% p.a.

b] Salary to Giriraja ₹3,000 p.m.

c] Giriraja's share of accrued profit upto the date of death based on previous year profit. Firm's profit for the year 2023-24 was ₹50,000.

d] Giriraja's share of goodwill ₹15,000 (As per A.S.–26)

Prepare Giriraja's Executors Account.

25] From the following information, prepare Balance Sheet of Mechatronics Company Ltd., as at 31.03.2025 as per schedule III of Companies Act, 2013

Particulars	₹
Share Capital	**4,00,000**
Reserves and Surplus	**2,00,000**
Creditors	**1,00,000**
Long term borrowings	**3,50,000**
Bills Payable	**50,000**
Fixed Assets	**5,00,000**
Cash in hand	**2,00,000**
Cash at Bank	**1,00,000**
Other non-current assets	**3,00,000**

26] Balaji Company Limited has given the following information:

Machinery as on 01.04.2024	₹1,50,000
Machinery as on 31.03.2025	₹2,00,000
Accumulated depreciation as on 01.04.2024	₹75,000
Accumulated depreciation as on 31.03.2025	₹50,000

During the year, a machinery costing ₹80,000 with accumulated depreciation of ₹30,000 was sold for ₹40,000. Calculate cash flow from investing activities on the basis of above information.

PART – D

VII. Answer any three questions, each question carries twelve marks. (3 x 12 = 36)

27] Varalakshmi, Vanajakshi and Bheemambika are partners sharing profits in the ratio of 5:3:2. Bheemambika retired on 31.03.2025 from the firm. On that date the Balance sheet of the firm was as follows:

Balance Sheet as on 31.03.2025

Liabilities	₹	Assets	₹
Creditors	**15,000**	Bank	**8,500**
Bills Payable	**12,000**	Debtors - 6,000	
Provision for legal fee	**6,000**	Less : PDD - 500	**5,500**
General reserve	**10,000**	Stock	**9,000**
Capitals :		Furniture	**40,000**
Varalakshmi 50,000		Buildings	**80,000**
Vanajakshi 30,000			
Bheemambika 20,000	**1,00,000**		
	1,43,000		**1,43,000**

Additional information :

a] Buildings have been appreciated by 20% and provision for doubtful debts increased to 10% on debtors.

b] Furniture is valued at ₹45,000.

c] Goodwill of the firm is valued at ₹40,000 (As per A.S.–26).

d] The value of stock is reduced by 10%.

Prepare :

i] Revaluation Account

ii] Partners' Capital Accounts and

iii] New Balance Sheet of the firm,.

28] Maya and Manasa are partners sharing profits and losses in the ratio of 2:1. Their balance sheet as on 31.03.2025 was as follows.

Balance Sheet as on 31.03.2025

Liabilities	₹	Assets	₹
Creditors	**20,000**	Cash at Bank	**6,000**
Bills Payable	**15,000**	Bills Receivable	**10,000**
Maya's Loan	**30,000**	Stock	**30,000**
General reserve	**6,000**	Debtors 45,000	
Capitals:		Less : P.D.D 5,000	**40,000**
Maya 50,000		Investments	**15,000**
Manasa 25,000	**75,000**	Furniture	**20,000**
		Machinery	**25,000**
	1,46,000		**1,46,000**

On the above date, they decided to dissolve the firm.

a] The assets were realized as follows :

Bills receivable ₹8,500

Sundry Debtors ₹42,000

Stock ₹25,000

Furniture ₹22,000

Machinery ₹28,000 and Unrecorded type writer ₹3,500.

b] Investment was taken over by Manasa at an agreed value of ₹14,000.

c] Creditors were settled @ 10% less than the book value.

d] Bills payable were discharged by Maya.

e] Realisation expenses amounted to ₹2,000.

Prepare :

i] Realisation Account

ii] Partners' Capital Accounts and

iii] Bank Account.

29] City Central Company Ltd., issued 10,000 equity shares of ₹100 each at a premium of ₹20 per share. The amount was payable as follows:

₹30 on application

₹50 on allotment (including premium)

₹40 on first and final call

All the shares were subscribed and money duly received except the first and final call money on 1000 shares. The directors forfeited these shares. Out of 1000 forfeited shares only 500 shares were reissued as fully paid up for ₹80 per share.

Pass the necessary journal entries in the books of the company.

30] Atridatta Company Ltd., issued 10,000. 10% debentures of ₹100 each on 01.04.2024 at a discount of 10%, redeemable at premium of 10%. Pass journal entries relating to the issue of debentures and debenture interest for the period ending 31.03.2025 assuming that interest was paid half yearly on 30th September and 31st March, tax deducted at source is 10%.

31] From the following information prepare Comparative Statement of Profit and Loss for the year ending 31.03.2024 and 31.03.2025 of Teju Company Ltd.

Particulars	31.03.2024 ₹	31.03.2025 ₹
Revenue from Operations	**10,00,000**	**11,00,000**
Other Income	**50,000**	**80,000**
Employee benefits expense	**1,50,000**	**1,65,000**
Purchase of goods	**4,00,000**	**5,50,000**
Changes in inventories	**2,00,000**	**1,00,000**
Finance costs	**50,000**	**30,000**
Depreciation	**60,000**	**50,000**
Income Tax	**57,000**	**85,500**

32] From the following information, you are required to calculate:

a] Quick ratio

b] Debt Equity ratio

c] Total assets to debt ratio

d] Inventory turnover ratio

e] Trade receivable turnover ratio

f] Net profit ratio

Particulars	₹
Equity share capital	**2,00,000**
General reserve	**1,00,000**
Long term borrowings	**1,00,000**
Trade payables	**1,25,000**
Fixed Assets	**1,50,000**
Inventories	**80,000**
Trade receivables	**2,20,000**
Cash and Cash equivalents	**75,000**
Total Assets	**5,25,000**
Revenue from operations	**4,00,000**
Gross profit	**80,000**
Profit before tax	**50,000**
Income tax	**15,000**

*****